III ADJ, Mangaluru S. C. 34/2020 PW-49
Date: 09.06.2026

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ದಕ್ಷಿಣ ಕನ್ನಡ, ಮಂಗಳೂರು**

**ಸೆಷನ್ಸ್ ಕೇಸ್ ನಂಬ್ರ 34/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಿರಣ್ ಕುಮಾರ್ | ಪ್ರಾಸಾಃ 49 |
| ತಂದೆಯ ಹೆಸರು | : | ವಿಠಲ ಬಂಗೇರ | ಚಾಸಾಃ 82 |
| ಪ್ರಾಯ | : | 42 ವರ್ಷ | ದಿನಾಂಕಃ **09.06.2026** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಚೀಟ್ ಫಂಡ್ ಕಂಪನಿಯ ನಿರ್ದೇಶಕ | |
| ವಾಸಸ್ಥಳ | | ಉರ್ವ ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ಮೊದಲು ನಾನು ಮಂಗಳೂರಿನ ಎಂ ಜಿ ರೋಡ್ ನಲ್ಲಿರುವ ರಿಲಯನ್ಸ್ ಕಂಪನಿಯಲ್ಲಿ ರೂರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ. ಆಗ ನನ್ನ ಬಳಿ ಕೆಎ-19-ಆರ್-7171ನೇ ನಂಬ್ರನ ಟಿ ವಿ ಎಸ್ ವಿಕ್ಟರ್ ಮೋಟಾರ್ ಸೈಕಲ್ ಇತ್ತು . ಅದನ್ನು ನಾನು 2003 ರಲ್ಲಿ ಖರೀದಿಸಿದ್ದೆ.

2. ನಾನು ಸದರಿ ಮೋಟಾರ್ ಸೈಕಲ್ ನ್ನು ವಿಟ್ಲದ ಮಹಮ್ಮದ್ ಶಾಹೀದ್ ಎಂಬುವವರಿಗೆ ಮಾರಾಟ ಮಾಡುವ ಸಲುವಾಗಿ ಆರ್ ಸಿ ಬದಲಾವಣೆಗೆ ಮಂಗಳೂರಿನ ಆರ್ ಟಿ ಓ ಕಚೇರಿಗೆ ಹೋಗಿದ್ದೆ. ಆಗ ಅಲ್ಲಿ ನನ್ನ ಸದರಿ ವಾಹನಕ್ಕೆ ಸಂಬಂಧಪಟ್ಟಂತೆ ಉಳ್ಳಾಲ ಪೋಲಿಸ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಾಗಿದೆ ಎಂಬುದು ತಿಳಿಯಿತು. ನಾನು ನನ್ನ ಮೋಟಾರ್ ಸೈಕಲ್ ನ್ನು ನಾನೇ ಉಪಯೋಗಿಸುತ್ತಿದ್ದು ಬೇರೆಯವರಿಗೆ ಯಾವುದೇ ಸಂದರ್ಭದಲ್ಲಿಯು ಕೊಟ್ಟಿರಲಿಲ್ಲ. ನಾನು ನಂತರ ಉಳ್ಳಾಲ ಪೋಲಿಸ್ ಠಾಣೆಗೆ ಹೋಗಿ ವಿಚಾರಿಸಿದಾಗ ಅಲ್ಲಿ ನನ್ನ ಮೋಟಾರ್ ಸೈಕಲ್ ನ ನಂಬ್ರನ ಬೇರೆ ಹೀರೋ ಹೊಂಡಾ ಸಿಬಿಜೆಡ್

ವಾಹನಕ್ಕೆ ಹಾಕಿದ್ದರು ಎಂದು ಗೊತ್ತಾಯಿತು. ಕೆಎ -19-ಆರ್-7171ನೇ ನಂಬ್ರಿನ ಹಿರೋ ಹೊಂಡಾ ಸಿ ಬಿ ಜೆಡ್ ಮೋಟಾರ್ ಸೈಕಲ್ ಮಂಗಳೂರಿನ ಆರ್ ಟಿ ಓ ಕಚೇರಿಯಲ್ಲಿ ನೊಂದಾಣಿಯಾಗಿರುವುದಿಲ್ಲ ಎಂಬುದು ನನಗೆ ತಿಳಿಯಿತು.

3. ಈಗ ನೋಡುತ್ತಿರುವ ದಾಖಲಾತಿಯು ನನ್ನ ಮೋಟಾರ್ ಸೈಕಲ್ ನ ಬಿ ರಿಜಿಸ್ಟರ್ extract ಆಗಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ-50 ರಂತೆ ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಆರ್.ಎಫ್ ವಕೀಲರಿಂದ</u>**

ಏನು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.